## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ನಗರಸಭೆಯ ನೀರು ಸರಬರಾಜು ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:-** ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಪತ್ರದ ಸಂಖ್ಯೆ.23572 ಡಿಎಂಎ 62 ಟಿಎನ್‌ಎಜಿಟಿ 2017-18, ದಿನಾಂಕ:10-08-2018, 04-10-2018 ಹಾಗೂ 04-12-2018.

.........

**ಪ್ರಸ್ತಾವನೆ:**

ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯಡಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ನಗರಕ್ಕೆ ಭಕ್ತರಹಳ್ಳಿ ಅರಸೀಕೆರೆ ಮೂಲದಿಂದ ನೀರು ಸರಬರಾಜು ಕಲ್ಪಿಸುವ ಯೋಜನೆಯ ಕಾಮಗಾರಿಯನ್ನು ರೂ.1095.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಅನುಷ್ಠಾನಗೊಳಿಸುವ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತಂತೆ ಸರ್ಕಾರದ ಆದೇಶ ಸಂಖ್ಯೆ: ಸನೀಇ 115 ಮಸಾವಿ 2015, ದಿನಾಂಕ:05-02-2018 ರಲ್ಲಿ ಸಣ್ಣ ನೀರಾವರಿ ಇಲಾಖೆ ಅಧೀನದಲ್ಲಿರುವ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕು, ಭಕ್ತರಹಳ್ಳಿಯ ಅರಸೀಕೆರೆಯನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು ಇವರಿಗೆ ಹಸ್ತಾಂತರಿಸಲು ಅದೇಶ ನೀಡಲಾಗಿರುತ್ತದೆ.

ಮುಂದುವರೆದು, ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯಡಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ನಗರಸಭೆಯ ರೂ.2125.00 ಲಕ್ಷಗಳ ಕ್ರಿಯಾಯೋಜನೆಯನ್ನು ಪೌರಾಡಳಿತ ನಿರ್ದೇಶಕರು ತಮ್ಮ ಆದೇಶ ಸಂಖ್ಯೆ: 20965 ಡಿಎಂಎ 41 ಟಿಎನ್‌ಎಜಿಟಿ 2017-18, ದಿನಾಂಕ:19-07-2017ರಲ್ಲಿ ಅನುಮೋದನೆ ನೀಡಿರುತ್ತಾರೆ. ಈ ಕ್ರಿಯಾಯೋಜನೆಯಲ್ಲಿ ಪ್ರಸ್ತಾವಿತ ಕಾಮಗಾರಿಯು ಸೇರಿದ್ದು, ಇದಕ್ಕೆ ರೂ.1215.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಮುಖ್ಯ ಅಭಿಯಂತರರು ದಿನಾಂಕ:27-11-2017ರ ಪತ್ರದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ನಗರಕ್ಕೆ ಭಕ್ತರಹಳ್ಳಿ ಅರಸೀಕೆರೆ ಮೂಲದಿಂದ ನೀರು ಸರಬರಾಜು ಕಲ್ಪಿಸುವ ಯೋಜನೆಯ ರೂ.1095 ಲಕ್ಷಗಳ ಅಂದಾಜು ಪಟ್ಟಿಯನ್ನು ತಾಂತ್ರಿಕವಾಗಿ ಪರಿಶೀಲಿಸಿರುತ್ತಾರೆ.

ಮೇಲೆ ಓದಲಾದ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯರವರ ಪತ್ರಗಳಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯಡಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ನಗರಸಭೆಯ ನೀರು ಸರಬರಾಜು ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಅಂದಾಜು ಪಟ್ಟಿಯನ್ನು 2015-16ನೇ ಸಾಲಿನ ಮಂಡಳಿಯ ದರಪಟ್ಟಿ ಹಾಗೂ 2016-17ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿ ಮತ್ತು ಮಾರುಕಟ್ಟೆ ದರಗಳನ್ನಾಧರಿಸಿ ತಯಾರಿಸಲಾಗಿರುತ್ತದೆ. ರೂ.1215.00 ಲಕ್ಷಗಳ ಅಂದಾಜು ಪಟ್ಟಿಯನ್ನು ಮಾನ್ಯ ಪೌರಾಡಳಿತ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:20-09-2017 ರಂದು ನಡೆದ ಸಭೆಯ ನಿರ್ಣಯದಂತೆ ರೂ.1095.00 ಲಕ್ಷಗಳಿಗೆ ಮಿತಿಗೊಳಿಸಲಾಗಿರುತ್ತದೆ.

ಚಿಂತಾಮಣಿ ನಗರವು ಚಿಕ್ಕಬಳ್ಳಾಪುರ ಜಿಲ್ಲೆಯ ತಾಲ್ಲೂಕು ಕೇಂದ್ರಗಳಲ್ಲೊಂದಾಗಿದ್ದು, ಬೆಂಗಳೂರಿನಿಂದ 70 ಕಿ.ಮೀ. ದೂರದಲ್ಲಿದೆ. ಪ್ರಸ್ತುತ ಪಟ್ಟಣಕ್ಕೆ ಮೇಲ್ಮೈ ನೀರಿನ ಮೂಲವಾದ ಕನ್ನಂಪಲ್ಲಿ ಮತ್ತು ನೆಕ್ಕುಂದಿ ಕೆರೆಯು ಬತ್ತಿ ಹೋಗಿರುವುದರಿಂದ ಕೊಳವೆ ಬಾವಿಗಳ ಮುಖಾಂತರ 4.0

Scanned with CamScanner

ಎಂ.ಎಲ್.ಡಿ. ಕುಡಿಯುವ ನೀರನ್ನು ನಗರಸಭೆಯ ವತಿಯಿಂದ ಸರಬರಾಜು ಮಾಡಲಾಗುತ್ತಿರುತ್ತದೆ. ಮಳೆಯ ಅಭಾವದಿಂದ ಅಂತರ್ಜಲ ಮಟ್ಟವು ದಿನೇ ದಿನೇ ಕುಸಿಯುತ್ತಿದ್ದು, ಕೊಳವೆ ಬಾವಿಯನ್ನು ಶಾಶ್ವತ ನೀರಿನ ಮೂಲವಾಗಿ ಅವಲಂಬಿಸಲು ಸಾಧ್ಯವಿಲ್ಲದ ಕಾರಣ ಚಿಂತಾಮಣಿ ನಗರಕ್ಕೆ ಭಕ್ತರಹಳ್ಳಿ ಅರಸೀಕೆರೆ ಮೂಲದಿಂದ 3.5 ಎಂ.ಎಲ್.ಡಿ. ಪ್ರಮಾಣದಷ್ಟು ನೀರು ಸರಬರಾಜು ಮಾಡುವ ಯೋಜನೆಯನ್ನು ರೂಪಿಸುವ ಸಲುವಾಗಿ ಈ ಪ್ರಸ್ತಾವನೆಗೆ ಅನುಮೋದನೆ ನೀಡುವಂತೆ ಮೇಲೆ ಓದಲಾದ ಪತ್ರಗಳಲ್ಲಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯರವರು ಕೋರಿರುತ್ತಾರೆ.

ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯರವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ.ನಅಇ 414 ಸಮಸ 2018,**
**ಬೆಂಗಳೂರು, ದಿನಾಂಕ:17-05-2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ "ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ನಗರಕ್ಕೆ ಭಕ್ತರಹಳ್ಳಿ ಅರಸೀಕೆರೆ ಮೂಲದಿಂದ ನೀರು ಸರಬರಾಜು ಮಾಡುವ ರೂ.1095.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ" ಈ ಕೆಳಕಂಡ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ:

**ಷರತ್ತುಗಳು**

1) ಅನುಮೋದಿತ ಕಾಮಗಾರಿಯ ಟೆಂಡರ್ ಪ್ರಕ್ರಿಯೆಗಳನ್ನು ಕೆ.ಟಿ.ಪಿ.ಪಿ ಕಾಯ್ದೆ-1999 ಮತ್ತು ಕೆ.ಟಿ.ಪಿ.ಪಿ ನಿಯಮಗಳು-2000 ಹಾಗೂ e-proc portal ಮುಖಾಂತರ ಕೈಗೊಂಡು, ಪ್ಯಾಕೇಜ್‌ಗಳ ಟೆಂಡರ್‌ಗಳಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದುಕೊಂಡು ಅನುಷ್ಠಾನಗೊಳಿಸತಕ್ಕದ್ದು.
2) ಕಾಮಗಾರಿಯ ಗುಣಮಟ್ಟದ ಬಗ್ಗೆ 3ನೇ ವ್ಯಕ್ತಿಯ ಮೂಲಕ ತಪಾಸಣೆಗೆ ಒಳಪಡಿಸತಕ್ಕದ್ದು.
3) ಈ ಆದೇಶದಲ್ಲಿ ಅನುಮೋದನೆ ನೀಡಿರುವ ಕಾಮಗಾರಿಯನ್ನು ಅನುಮೋದಿತ ಅಂದಾಜು ಮೊತ್ತದ ಮಿತಿಯಲ್ಲಿಯೇ ಅನುಷ್ಠಾನಗೊಳಿಸತಕ್ಕದ್ದು. ಹೆಚ್ಚುವರಿಯಾದಲ್ಲಿ ಚಿಂತಾಮಣಿ ನಗರಸಭೆಯು ತನ್ನ ಸ್ವಂತ ಅನುದಾನದಿಂದ ನಿಯಮಾನುಸಾರ ಭರಿಸತಕ್ಕದ್ದು, ಸರ್ಕಾರದಿಂದ ಯಾವುದೇ ಹೆಚ್ಚುವರಿ ಅನುದಾನ ಒದಗಿಸಲಾಗುವುದಿಲ್ಲ.
4) ಉಳಿದಂತೆ ಸರ್ಕಾರದ ಆದೇಶ ಸಂಖ್ಯೆ:ನಅಇ 88 ಸಮಸ 2015, ದಿನಾಂಕ:29-11-2016 ರ ಆದೇಶದಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯಡಿ ವಿಧಿಸಿರುವ ನಿಬಂಧನೆಗಳು ಹಾಗೂ ಮಾರ್ಗಸೂಚಿಗಳನ್ವಯ ಈ ಆದೇಶದಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳನ್ನು ಯಥಾವತ್ತಾಗಿ ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: FD 843 Exp-9/2018 ದಿನಾಂಕ:16-01-2019 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹಾಗೂ ಸಚಿವ ಸಂಪುಟವು ಪ್ರಕರಣ ಸಂಖ್ಯೆ:ಸಿ/ 228/ 2019, ದಿನಾಂಕ:09-05-2019 ರಂದು ನೀಡಿರುವ ಅನುಮೋದನೆ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಲಲಿತಾಬಾಯಿ. ಕೆ
(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ(ಯೋ.ಮೇ.ಕೋ),
ನಗರಾಭಿವೃದ್ಧಿ ಇಲಾಖೆ

**ಇವರಿಗೆ :-**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.



Scanned with CamScanner

Karnataka Government Proceedings

Sub: - Administrative approval for the estimate of water supply scheme to CMC Chintamani under Nagarothana-3 grants of Chikkaballapur District- Reg.

Ref: - Director Municipal Administration ltr no. 23572/ DMA/ 62/ TNAGT/ 2017-18 dtd: 10-08-2018, 04-10-2018 and 04-12-2018.

************

**Preamble**:-

The administrative approval to the estimate for providing water supply scheme to Chintamani city with Bhaktarahalli Arsikere tank as source under of Nagarothana( Municipality) -3 grants amounting to Rs. 1095 lakhs, in this regards order has been issued vide G.O order no. SNIE/ 115/ MSAV/ 2015 dtd: 05-02-2018, handed over the Bhaktarahalli Arsikere tank belongs to Miner Irrigation department in Chintamani taluk to Managing director, Karnataka urban water supply and drainage Board, Bengaluru.

Further, The Project Director their order no. : 20965/ DMA/ 41/ TNAGT/ 2017-18 dtd: 19-07-2017 was given an approval for action plan amounting to Rs. 2125 Lakhs to Chintamani CMC, Chikkaballapur District under Nagarothana( Municipality) -3 grants. The siad proposed work is included in this action plan for which Rs. 1215.00 Lakhs amount has been reserved.

The Chief Engineer, Karnataka Urban Water Supply & Drainage Board, Bangalore has been technically verified vide ltr dtd: 27-11-2017 for implementation of providing water supply scheme to Chintamani city in Chikkaballpur district with Bhaktarahalli Arsikere as source with estimate amounting to Rs. 1095 Lakhs.

As above said, The Director Municipal Administration was submitted the proposal letters for administrative approval for the work of providing water supply scheme to Chintamani city of Chikkaballpur district with Bhaktarahalli Arsikere as source under Nagarothana-3 grants. The above said estimate is prepared based on Board SR 2015-16 , PWD SR 2016-17 and Prevailing market rates. The meeting held under the chairmanship of DMA Minister has concluded by restricting the estimated amount of Rs. 1215.00 Lakhs to Rs. 1095.00 Lakhs.

Chintamani city is the taluk headquarters of Chikkaballapur District, which is about 70Kms away from Bangalore. Presently 4.00 MLD drinking water is supplied to Chitamani city through Borewells, Due to dry-up of Kannampalli tank and Nekkunndi tank. The ground water level is getting declined day by day due to rainfall depletion. Since, borewells source cannot be relied as permanent water source. With respect to the above said, The Director Municipal Administration was requested to give the approval for proposal in order to implement water supply scheme to Chintamani city with Bhaktarahalli Arsikere as source to draw the 3.50 MLD of water.

Scanned with CamScanner

After examining Director Municipal Administration proposal, The Government order's as follows.

**G.O No. NAE/ 414/ SMS/ 2018/ Bangalore dtd: 17-05-2019**

In view of facts in detailed proposal, The Government has given administrative approval for "Providing water supply scheme to Chintamani city with Bhaktarahalli Arsikere as source" amounting to Rs. 1095.00 Lakhs with certain conditions as below.

**Conditions:-**

1. The tender procurement of approved works is to be done as per KTPP ACT-1999 and KTPP RULES – 2000 and through e-proc portal. For Package work tenders, approval is to be taken from the respective authorities and then implemented.
2. The quality of works is to be inspected by 3rd party agency.
3. The implementation of approved works in this order is restricted to the approved estimated cost, if it exceeds, it has to borne by the CMC, Chintamani. However this additive cost will not be provided by the Government.
4. As per the G.O No. NAE/ 88/ SMS/ 2015 dtd: 29-11-2016 order, the approved works are to be implemented as per the restrictions and guidelines imposed under Nagarothana ( Municipality)-3 grants.

This order is passed under consent of back cover No. FD/ 843/ Exp.9/ 2018 dtd: 16-01-2019 by Finance Department and upon approval Case No. C/ 228/ 2019 dtd: 09-05-2019 by the Cabinet.

Government Governor by the orders
and in the name of
Sd/-
(Laleeta Bai. K)
Under secretary of Govt.( Yo.Me.co)
Department of Urban Development.

Scanned with CamScanner